ಅನನ್ಯಾ ಬಿರ್ಲಾ, ಬೆಲ್‌ಸ್ಟಾರ್‌ನ ಕಲ್ಪನಾ ಶಂಕರ್, ಹೀಗೆ ಅನೇಕ ಮಹಿಳೆಯರು ಮೈಕ್ರೊಫೈನಾನ್ಸ್‌ನಲ್ಲಿ ಅಗ್ರಪಂಕ್ತಿಯಲ್ಲಿದ್ದಾರೆ. ಮೈಕ್ರೊಫೈನಾನ್ಸ್ ಉದ್ಯೋಗಿಗಳಲ್ಲಿ ಮಹಿಳೆಯರು ಕಮ್ಮಿ ಎನ್ನುವುದರಲ್ಲಿ ಹುರುಳಿದೆ. ಮೈಕ್ರೊಫೈನಾನ್ಸ್ ಸಂಸ್ಥೆಯಲ್ಲಿ ಸಾಲ ವಸೂಲು ಮಾಡುವ ಕೆಲಸ ನಿರ್ಮಮಕಾರದ್ದು. ಅದಕ್ಕೆ ಓಡಾಡಬೇಕು. ಹೀಗಾಗಿ ಸಹಜವಾಗಿ ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಇದ್ದಿರಬಹುದು.

ಆದರೆ ಸ್ಮಿತಾ ಹೇಳುವ ಮಾತುಗಳು ಗ್ರಾಮೀಣ್ ಮಾದರಿಯ ಮೈಕ್ರೊಫೈನಾನ್ಸಿಗೆ ಅನ್ವಯಿಸುತ್ತದೆ. ಇದನ್ನು, ಸ್ವಸಹಾಯ ಗುಂಪುಗಳಿಗೆ ಅನ್ವಯಸಬಹುದೇ ಎಂಬುದು ಕುತೂಹಲಕರ ಪ್ರಶ್ನೆ. ಸ್ವಸಹಾಯ ಗುಂಪುಗಳಲ್ಲಿ– ಅವು ಆಶಯಕ್ಕೆ ತಕ್ಕಂತೆ ನಡೆಯುತ್ತಿದ್ದರೆ– ಮಹಿಳೆಯರೇ ಯಾರಿಗೆ, ಎಷ್ಟು ಸಾಲ ಕೊಡಬೇಕೆನ್ನುವುದನ್ನು ನಿರ್ಧರಿಸುತ್ತಾರೆ. ಅವರೇ ಗುಂಪಿನ ಲೆಕ್ಕಪತ್ರದ ನಿರ್ವಹಣೆ ಮಾಡುತ್ತಾರೆ, ಮಹಿಳೆಯರೇ (ಪುರುಷ ಪ್ರಧಾನವಾಗಿರಬಹುದಾದ) ಬ್ಯಾಂಕ್ ಮ್ಯಾನೇಜರುಗಳ ಜೊತೆ ವ್ಯವಹರಿಸುತ್ತಾರೆ. ಹಾಗೆಯೇ, 'ರಾಷ್ಟ್ರೀಯ ಜೀವನೋಪಾಯ ಸಂವರ್ಧನೆ ಅಭಿಯಾನ'ದ ಮೂಲಕ ಏರ್ಪಾಟಾಗಿರುವ ಗ್ರಾಮೀಣ ಒಕ್ಕೂಟ ಮತ್ತು ಜಿಲ್ಲಾ ಒಕ್ಕೂಟಗಳನ್ನು ಸ್ವ-ಸಹಾಯ ಸಂಸ್ಥೆಯ ಮಹಿಳಾ ಪ್ರತಿನಿಧಿಗಳೇ ನಡೆಸುತ್ತಿದ್ದಾರೆ. ಹೀಗಾಗಿ ಇಲ್ಲಿ ಗ್ರಾಹಕರೂ, ಉಳಿತಾಯ ಮಾಡುವವರೂ, ನಿರ್ವಹಣೆ ಮಾಡುವವರೂ ಮಹಿಳೆಯರೇ ಆದ್ದರಿಂದ ಸಬಲೀಕರಣದ ಆಯಾಮಗಳು ಹೇಗಿರಬಹುದು ಎನ್ನುವುದು ಕುತೂಹಲಕರ ವಿಷಯ. ಬಹುಶಃ ಸ್ವ-ಸಹಾಯ ಗುಂಪುಗಳ ಮಹಿಳೆಯರು ಹೆಚ್ಚು ಸಬಲರಾಗಿ ಕಾಣಬಹುದೇನೋ. ಸ್ಮಿತಾ ಮಾಡಿದಷ್ಟು ವ್ಯವಸ್ಥಿತವಾಗಿ ನಾನು ಅಧ್ಯಯನವನ್ನು ಕೈಗೊಂಡಿಲ್ಲವಾದರೂ, ನಾನು ನನ್ನ ಕ್ಷೇತ್ರ ಕಾರ್ಯದಲ್ಲಿ ಕಂಡಿರುವ ಈ ಗುಂಪುಗಳ ಮಹಿಳೆಯರಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮತ್ತು ಸ್ವಾಯತ್ತತೆಯನ್ನು ಕಂಡಿದ್ದೇನೆ. ಉದಾಹರಣೆಗೆ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿನ ಸ್ವಸಹಾಯ ಗುಂಪುಗಳ ಮಹಿಳೆಯರು ಹೊರಗಿನಿಂದ ಬರುವ ಪುರುಷರನ್ನು ಆತ್ಮವಿಶ್ವಾಸದಿಂದ ಕೈಕುಲುಕಿ ಬರಮಾಡಿಕೊಳ್ಳುತ್ತಾರೆ. ಇದು ಕೇವಲ ಸಾಂಕೇತಿಕವಾದ ಕ್ರಿಯೆ ಎಂದು ನಾವು ತಳ್ಳಿಹಾಕಬಹುದು. ಆದರೆ ಅಸ್ಪೃಶ್ಯತೆಯ ಹಿನ್ನೆಲೆಯ ಸಮಾಜದಲ್ಲಿ, ಹೊರಗಿನ ಪುರುಷರ ಕೈಕುಲುಕಿ, ಕಣ್ಣಿಗೆ ಕಣ್ಣಿಟ್ಟು ಮಾತನಾಡುವಷ್ಟು ಸೀಮೋಲ್ಲಂಘನವು ಮಹತ್ತರವಾದದ್ದು ಎಂದು ನಾನು ನಂಬಿದ್ದೇನೆ. ಆದರೆ ಹೀಗೆ ಗುಂಪುಗಳಲ್ಲಿರುವಾಗ ಕಾಣುವ ಆತ್ಮವಿಶ್ವಾಸ ಮನೆಗೂ ಅನ್ವಯಿಸುತ್ತದೆಯೇ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಮನೆಯಲ್ಲಿ ಗಂಡ, ಮಾವ ಮತ್ತು ಮಗನಂತಹ ಇತರ ಪುರುಷರ ಎದುರಲ್ಲೂ ಇಂತಹುದೇ ಆತ್ಮವಿಶ್ವಾಸ ಇರುತ್ತದೆಯೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸ್ಮಿತಾ ಇದಕ್ಕೆ ಮಾಪನವಾಗಿ ಹೆಣ್ಣುಮಕ್ಕಳ ಹೆಸರಿನಲ್ಲಿ ಎಷ್ಟು ಆಸ್ತಿಯಿದೆ, ಆರ್ಥಿಕ ಸಂಪನ್ಮೂಲಗಳ ಮೇಲೆ ಎಷ್ಟು ಹಿಡಿತವಿದೆ ಎನ್ನುವ ಪ್ರಶ್ನೆಯನ್ನು ಎತ್ತುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ನಿಜಕ್ಕೂ ಸಬಲೀಕರಣದ ಮಾರ್ಗ ದೀರ್ಘ ಮತ್ತು ದುರ್ಗಮವಾದದ್ದು ಅನ್ನಿಸುತ್ತದೆ.

ಯಾವುದೇ ವ್ಯಾಪಾರವನ್ನು ನೋಡುವಾಗ ಆ ವ್ಯಾಪಾರದಲ್ಲಿ ಲಾಭ-ನಷ್ಟಗಳು ಹೇಗಿವೆ, ವ್ಯಾಪಾರ ಹಸನಾಗಿ ನಡೆಯುತ್ತಿದೆಯಾ ಎಂದು ನೋಡುವುದು ಸಹಜವೇ. ಆದರೆ ಎಲ್ಲ ವ್ಯಾಪಾರಗಳಲ್ಲೂ ಸಬಲೀಕರಣ ಮತ್ತು ಇತರ ಉದ್ದೇಶಗಳನ್ನು ಹುಡುಕಿ ಹೊರಡುವುದಿಲ್ಲ. ಅನೇಕ ವರ್ಷಗಳಿಂದ ಇದೇ ಕ್ಷೇತ್ರದಲ್ಲಿ ನಡೆಯುತ್ತಿರಬಹುದಾದ ಸರ್ಕಾರಿ ಬ್ಯಾಂಕುಗಳ ಅಧ್ಯಯನದಲ್ಲೂ ಸಬಲೀಕರಣದ ಪ್ರಶ್ನೆ ಕೇಳುವುದು ಅಪರೂಪ. ಅದೇ ರೀತಿಯಲ್ಲಿ ಲಾಭಾರ್ಜನೆಯ ಉದ್ದೇಶದಿಂದ ಹುಟ್ಟಿರುವ ಮೈಕ್ರೊಫೈನಾನ್ಸ್ ಸಂಸ್ಥೆಗಳಲ್ಲಿ ಈ ರೀತಿಯ ಪ್ರಶ್ನೆಯ ಅನುಸಂಧಾನಕ್ಕೆ ಎದುರಾಗುವುದು ಏಕೆ? ಇದು ಕುತೂಹಲದ ಪ್ರಶ್ನೆ. ಬಹುಶಃ ಇದಕ್ಕೆ ಮೈಕ್ರೊಫೈನಾನ್ಸ್ ಸಂಸ್ಥೆಗಳೇ ಮೂಲ ಕಾರಣವಿರಬಹುದು. ಈ ಸಂಸ್ಥೆಗಳು ತಮ್ಮ ಆಶಯವನ್ನು ವ್ಯಕ್ತಪಡಿಸುವಾಗ ಲಾಭಾರ್ಜನೆಯನ್ನು ಹಿನ್ನೆಲೆಗಿಟ್ಟು, ಮಹಿಳಾ ಸಬಲೀಕರಣ ಮತ್ತು ಬಡತನ ನಿರ್ಮೂಲನದ ಮಾತುಗಳಾಡುವುದರಿಂದ ಆ ವಿಷಯಗಳ ಬಗ್ಗೆ ಜನ ಸಂಶೋಧನೆ ನಡೆಸಿ ತಕ್ಕ ಪ್ರಶ್ನೆಗಳನ್ನು ಕೇಳುವುದರಲ್ಲಿ ಆಶ್ಚರ್ಯವೇನೂ ಇಲ್ಲ.

●